ಸಿ.ಸಿ. ಸಂಃ 982/2017 ಪಿ.ಡಬ್ಲ್ಯು: 01

ದಿನಾಂಕಃ 02-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಕೆ.ಪಿ.ಎಲ್ ಆರೋಪಿ ಪರ ವಕೀಲರಿಂದಃ

ಆರೋಪಿಗಳನ್ನು ಮೊದಲಬಾರಿಗೆ ಇಂದೇ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳನ್ನು 2015 ರಲ್ಲಿ ವಿದುರಾಷ್ವತ ಬಳಿ ನೋಡಿರುತ್ತೇನೆ. ನನ್ನ ಊರಿನಿಂದ ವಿದುರಾಷ್ವತವು 20-25 ಕಿ.ಮೀ ದೂರದಲ್ಲಿರುತ್ತದೆ. ಆರೋಪಿಗಳನ್ನು ವಿದುರಾಷ್ವತ ಸರ್ಕಲ್ ಬಳಿ ನೋಡಿರುತ್ತೇನೆ. ನಾನು ಆರೋಪಿಗಳನ್ನು ವಿದುರಾಷ್ವತ ಸರ್ಕಲ್ ಬಳಿ ನೋಡಿದಾಗ ಅಲ್ಲಿ ಸುಮಾರು 30 ಜನ ಸೇರಿದ್ದರು. ಆರೋಪಿಗಳು ಸೇಂದಿಯನ್ನು ತೆಗೆದುಕೊಂಡು ಹೋಗುತ್ತಿರುವಾಗ ಅವರು ವಿದುರಾಷ್ವತ ಬಳಿ ಇದ್ದಾಗ ನಾನು ನೋಡಿರುತ್ತೇನೆ. ಆ ಸಮಯದಲ್ಲಿ ನಾನು ಅಬಕಾರಿ ಇಲಾಖೆಯಲ್ಲಿ out source ಕೆಲಸದಲ್ಲಿ ಇದ್ದೆನು. ನನ್ನ ಹೇಳಿಕೆಯಲ್ಲಿ ನಾನು ಕೂಲಿ ಕೆಲಸ ಮಾಡುತ್ತಿರುವುದಾಗಿ ಹೇಳಿದ್ದೆನು ಎಂದರೆ ಸರಿಯಲ್ಲ. ನಾನು ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆನು ಎಂದು ತೋರಿಸಲು ನೇಮಕಾತಿ ಪತ್ರ ಇರುವುದಿಲ್ಲ. ಅಬಕಾರಿ ನಿರೀಕ್ಷಕರು ನನ್ನನ್ನು ಕರೆಸಿಕೊಂಡಾಗ ಅವರು ನೀಡಿದ ಪತ್ರಗಳಿಗೆ ಸಹಿ ಮಾಡುವುದೇ ನನ್ನ ಕೆಲಸ ಎಂದರೆ ಸರಿ.

ಆ ದಿನ ಸಂಜೆ 05.00 ಗಂಟೆ ಸಮಯದಲ್ಲಿ ನಾನು ಅಬಕಾರಿ ನಿರೀಕ್ಷಕರೊಂದಿಗೆ ಗಸ್ತು ಕಾರ್ಯದಲ್ಲಿ ಸಹಕರಿಸುತ್ತಿದ್ದೆನು ಹಾಗೂ 05.30 ಗಂಟೆಗೆ ನಾವು ವಿದುರಾಷ್ವತ ಸರ್ಕಲ್ ಗೆ ಹೋದೆವು. ವಿದುರಾಷ್ವತ ಸರ್ಕಲ್ ಬಳಿ ಇದ್ದ ಹಲವಾರು ಜನರು ಮತ್ತು ಅಂಗಡಿಗಳ ಮಾಲೀಕರನ್ನು ಸಾಕ್ಷಿಗಳನ್ನಾಗಿ ಸೇರಿಸಿಕೊಳ್ಳಲು ತೊಂದರೆ ಇತ್ತೆ? ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಜನರು ಮತ್ತು ಅಂಗಡಿ ಮಾಲೀಕರು ಸಾಕ್ಷಿಗಳಾಗಿ ಸಹಕರಿಸಲು ಒಪ್ಪಲಿಲ್ಲ ಎಂದು ನುಡಿಯುತ್ತಾರೆ. ನಾನು ವಿದುರಾಷ್ವತ ಸರ್ಕಲ್ ಗೆ ಹೋಗಿರುವುದಿಲ್ಲ ಹಾಗೂ ಆರೋಪಿಗಳಿಂದ ಯಾವುದೇ ಮಧ್ಯವನ್ನು ಅಥವಾ ವಾಹನವನ್ನು ವಶಪಡಿಸಿಕೊಂಡಿಲ್ಲವಾದರೂ ಅಬಕಾರಿ ಇಲಾಖೆಯವರ ಒತ್ತಾಯದ ಮೇರೆಗೆ ನ್ಯಾಯಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಶಪಡಿಸಿಕೊಂಡೆವು ಎಂಬ ವಾಹನದ ಸಂಖ್ಯೆ ನನಗೆ ನೆನಪಿಲ್ಲ. ಸದರಿ ವಾಹನ ಯಾರಿಗೆ ಸೇರಿದ ವಾಹನ ಎಂಬುದು ನನಗೆ ಗೊತ್ತಿಲ್ಲ. ಆ ದಿನ ಚುನಾವಣೆಯ ಸಂದರ್ಭವಾಗಿತ್ತು ಎಂದರೆ ಸರಿ. ಆರೋಪಿಗಳ ಊರಿನಿಂದ ಆಂಧ್ರಪ್ರದೇಶವು 100 ಕಿ.ಮೀ ದೂರ ಇರುವ ಕಾರಣ ಅವರು ಅಲ್ಲಿಗೆ ಹೋಗಿರಲಿಲ್ಲ ಮತ್ತು ಯಾವುದೇ ಮಧ್ಯವನ್ನು ಸಾಗಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಬಕಾರಿ ಇಲಾಖೆಯ ಅಂಕಿ-ಅಂಶಗಳಿಗೋಸ್ಕರ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು

ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ವಾಹನವು ಆರೋಪಿಗಳ ವಾಹನ ಅಲ್ಲದಿದ್ದ ಕಾರಣ ವಾಹನವನ್ನು ಬಿಡಿಸಿಕೊಳ್ಳದೇ ಅದು ಈಗಲೂ ಅಬಕಾರಿ ಇಲಾಖೆಯ ವಶದಲ್ಲಿದೆ ಎಂದರೆ ಗೊತ್ತಿಲ್ಲ. ಆರೋಪಿಗಳು ಆ ದಿನ ವಿದುರಾಶ್ವತ ದೇವಸ್ಥಾನಕ್ಕೆ ಬಸ್ಸಿನಲ್ಲಿ ಹೋಗಿ ವಾಪಸ್ಸು ಬರುವಾಗ ಅವರು ಬಸ್ಸಿಗಾಗಿ ವಿದುರಾಶ್ವತ ಸರ್ಕಲ್ ಬಳಿ ಅಪರಿಚಿತ ವಾಹನದ ಪಕ್ಕದಲ್ಲಿ ನಿಂತಿದ್ದಾಗ ಅವರನ್ನು ತಡೆದು ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ನಿಪಿ-2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದೆ. 1 ನೇ ಆರೋಪಿಯು ಯಾವುದೇ ವಾಹನದಲ್ಲಿ ಸೇಂದಿಯನ್ನು ಸಾಗಿಸುತ್ತಿರಲಿಲ್ಲವಾದರೂ ಅಂಕಿ-ಅಂಶಗಳಿಗೋಸ್ಕರ ಅವರ ವಿರುದ್ಧ ಸುಳ್ಳು ಪ್ರಕರಣವನ್ನು ಸೃಷ್ಟಿಸಿ ನಮ್ಮಿಂದ ಸುಳ್ಳು ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಇಂದೇ ಮೊದಲ ಬಾರಿಗೆ ನಾನು 1 ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಅಬಕಾರಿ ಇಲಾಖೆಯ ನನ್ನ ಮೇಲಾಧಿಕಾರಿಗಳ ಒತ್ತಡದ ಮೇರೆಗೆ ನ್ಯಾಯಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ವಿಚಾರವನ್ನು ನನ್ನ ಹೇಳಿಕೆಯಲ್ಲಿ ತಿಳಿಸಲು ನನಗೆ ತೊಂದರೆ ಇರಲಿಲ್ಲ. 1 ನೇ ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಅವರ ಮೇಲೆ ಪ್ರಕರಣವನ್ನು ದಾಖಲಿಸಲು ನಾನು ಕೂಲಿ ಕೆಲಸದಲ್ಲಿ ತೊಡಗಿರುವುದಾಗಿ ಸುಳ್ಳು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಪ್ಲಾಸ್ಟಿಕ್ ಬಾಟಲ್ ಗಳ ಮಾದರಿಯ ಬಾಟಲ್ ಗಳು ಸಾಮಾನ್ಯವಾಗಿ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಅಂಗಡಿಯಿಂದ ಬಾಟಲ್ ಗಳನ್ನು ನನ್ನ ಮೇಲಾಧಿಕಾರಿಗಳು ತೆಗೆದುಕೊಂಡು ಬಂದು ಈ ಪ್ರಕರಣದ ಮು. ಮಾ ಗಳಾಗಿ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ಸೇಂದಿಯನ್ನು ಸಾಗಿಸುತ್ತಿದ್ದರು ಎಂದು ಹೇಳುವ ಕ್ಯಾನ್ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ, ಕಛೇರಿಯಲ್ಲಿ ಇಟ್ಟುಕೊಂಡಿರುತ್ತಾರೆ. ಆ ದಿನ ಅಬಕಾರಿ ಇಲಾಖೆಯವರು ಯಾವುದೇ ಕ್ಯಾನ್ ಗಳನ್ನು ಜಪ್ತುಪಡಿಸಿಕೊಳ್ಳದ ಕಾರಣ ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು **2** ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ ರವರಿಂದಃ

ನಾನು ಅಬಕಾರಿ ಇಲಾಖೆಯ ಸುಮಾರು 7-8 ಪ್ರಕರಣಗಳಲ್ಲಿ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ನಾನು ಸುಮಾರು 6 ವರ್ಷಗಳ ಕಾಲ ಅಬಕಾರಿ ಇಲಾಖೆಯಲ್ಲಿ ಕೆಲಸ

ಮಾಡಿರುತ್ತೇನೆ. ನಾನು ಅಬಕಾರಿ ಇಲಾಖೆಯಲ್ಲಿ ದಾಳಿ ನೌಕರನಾಗಿ ಕೆಲಸ ಮಾಡುತ್ತಿರುವ ವಿಚಾರವನ್ನು ನನ್ನ ಹೇಳಿಕೆಯಲ್ಲಿ ನಮೂದಿಸಲಾಗಿದೆ. ನಾನು ದಾಳಿ ಕಾಲದಲ್ಲಿ ಸಹಕರಿಸುವ ಕೆಲಸದಲ್ಲಿ ತೊಡಗಿದ್ದೆನು. ಆ ದಿನ ನನ್ನೊಂದಿಗೆ ಚಾ.ಸಾ 1, ಚಾ.ಸಾ 3 ಮತ್ತು 5 ರವರು ಇದ್ದರು. ಸ್ಥಳಕ್ಕೆ ನಾವು ಸಂಜೆ 05-20 ಗಂಟೆಗೆ ಹೋದೆವು. ಆರೋಪಿಗಳು ವಾಹನದಲ್ಲಿ ಚೌಳೂರು ಕಡೆಯಿಂದ ಬರುತ್ತಿದ್ದರು. ಆರೋಪಿಗಳು ಅಲ್ಲಿಗೆ ಬಂದಾಗ ಪ್ರಥಮವಾಗಿ ಅವರಲ್ಲಿ ಯಾರನ್ನು ನೋಡಿದೆನು ಎಂಬುದು ನನಗೆ ನೆನಪಿಲ್ಲ. ಘಟನೆ ನಡೆದಿದೆ ಎಂಬ ಸ್ಥಳದಲ್ಲಿ ಚಾ.ಸಾ 1 ರವರು ಬರವಣಿಗೆಯನ್ನು ಮಾಡಿದರು. ಚಾ.ಸಾ 1 ರವರು ಸದರಿ ಸ್ಥಳದ ಚಕ್ಕುಬಂದಿಯನ್ನು ಬರೆದುಕೊಂಡರೋ ಇಲ್ಲವೋ ನನಗೆ ನೆನಪಿಲ್ಲ. ನ್ಯಾಯಾಲಯದ ಮುಂದೆ ಇರುವ ಮು. ಮಾಗಳ ಮೇಲೆ ಅಂಟಿಸಿರುವ ಮಾದರಿ ಚೀಟಿಗಳ ಮೇಲೆ ನಾನು ಸಹಿ ಮಾಡಿರುತ್ತೇನೆ. ಈ ಪ್ರಕರಣದಲ್ಲಿ ಸಾಕ್ಷಿಗಳೆಲ್ಲರೂ ಅಬಕಾರಿ ಇಲಾಖೆಯವರು ಎಂದರೆ ಸರಿ.

ನಾನು ಆ ದಿನ ವಿದುರಾಶ್ವತ ಸರ್ಕಲ್ ಬಳಿ ಹೋಗಲಿಲ್ಲ ಹಾಗೂ ಆರೋಪಿಗಳನ್ನು ಅಲ್ಲಿ ನೋಡಲಿಲ್ಲ ಮತ್ತು ಆರೋಪಿಗಳನ್ನು ಇಂದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿ. ನಿಪಿ-2 ರ ಪಂಚನಾಮೆಯನ್ನು ಅಬಕಾರಿ ಇಲಾಖೆಯ ಕಛೇರಿಯಲ್ಲಿ ಕುಳಿತು ತಯಾರಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಒತ್ತಾಯದ ಮೇರೆಗೆ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(**ಮರುವಿಚಾರಣೆ ಇರುವುದಿಲ್ಲ**.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು